



## ಮೂರಕ್ಕೆ ಮುಕ್ತಾಯ?

'ದಂಡುಪಾಳ್ಯ' ಸರಣಿಯ ಮೂರನೇ ಸಿನಿಮಾ ತೆರೆ ಕಾಣಲು ಸಜ್ಜಾಗಿದೆ. ಶ್ರೀನಿವಾಸರಾಜು ನಿರ್ದೇಶನದ ಮೊದಲೆರಡು ಚಿತ್ರಗಳು ಹಸಿಬಿಸಿ ಕ್ರೌರ್ಯದ ಕಥನಗಳಿಂದ ಪ್ರೇಕ್ಷಕರ ಗಮನಸೆಳೆದಿದ್ದವು. ಮೊದಲನೆಯ ಭಾಗ ಗಲ್ಲಾಪೆಟ್ಟಿಗೆಯಲ್ಲೂ ಸಾಕಷ್ಟು ಯಶಸ್ಸು ಗಳಿಸಿತ್ತು.

ದಂಡುಪಾಳ್ಯ ಹೆಸರು ಬಳಸಿಕೊಳ್ಳಲು ಕಾನೂನು ತೊಡಕು ಇರುವುದರಿಂದ ಶ್ರೀನಿವಾಸರಾಜು ತಮ್ಮ ಚಿತ್ರದ ಶೀರ್ಷಿಕೆಯನ್ನು ಮೂರು ಉದ್ದನೆ ಗೆರೆಗಳ ಮೂಲಕ ಸೂಚಿಸಿದ್ದಾರೆ. ರಕ್ತದಲ್ಲಿ ಎಳೆದಂತಿರುವ ಈ ಗೆರೆಗಳೇ ಚಿತ್ರದ ಹೂರಣವನ್ನೂ ಹೇಳುವಂತಿವೆ.

ಪೂಜಾಗಾಂಧಿ, ರವಿಕಾಳೆ, ಸಂಜನಾ, ರವಿಶಂಕರ್ ಹಾಗೂ ಮಕರಂದ ದೇಶಪಾಂಡೆ ತಾರಾಗಣದಲ್ಲಿರುವ ಪ್ರಮುಖರು. ವೆಂಕಟೇಶ್ ಪ್ರಸಾದ್ ಛಾಯಾಗ್ರಹಣ ಹಾಗೂ ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ. ಕನ್ನಡದ ಜೊತೆಗೆ ತೆಲುಗಿನಲ್ಲೂ ಸಿನಿಮಾ ಬಿಡುಗಡೆಯಾಗಲಿದೆ.

ದಂಡುಪಾಳ್ಯದ ಮೊದಲ ಭಾಗದಲ್ಲಿ ದಂಡುಪಾಳ್ಯ ಗ್ಯಾಂಗ್‌ನ ಕ್ರೌರ್ಯದ ಅನಾವರಣವಿದ್ದರೆ, ಎರಡನೇ ಭಾಗದಲ್ಲಿ ಪೊಲೀಸ್ ಕ್ರೌರ್ಯದ ಚಿತ್ರಣವಿತ್ತು. ಎರಡನೇ ಸಿನಿಮಾದ ಅಂತ್ಯದಲ್ಲಿ ಉಳಿದುಕೊಂಡಿದ್ದ ಪ್ರಶ್ನೆಗಳಿಗೆ ಮೂರನೇ ಭಾಗದಲ್ಲಿ ತಾರ್ಕಿಕ ಉತ್ತರಗಳನ್ನು ನೀಡಲಾಗಿದೆಯಂತೆ. ಅಂದಹಾಗೆ, ಈ ಚಿತ್ರದ ಮೂಲಕ ಶ್ರೀನಿವಾಸರಾಜು ಅವರ ದಂಡುಪಾಳ್ಯ ಸರಣಿ ಕೊನೆಗೊಳ್ಳುತ್ತದೆಯಾ? ಉತ್ತರ ಇರುವುದು ನಿರ್ದೇಶಕರ ಬಳಿಯಲ್ಲಲ್ಲ – ಪ್ರೇಕ್ಷಕರ ಬಳಿ.

## ಮದುವೆಯ ಅರ್ಥದ ಹುಡುಕಾಟ



ನಿರ್ದೇಶನದ ಚೊಚ್ಚಿಲ ಸಿನಿಮಾಕ್ಕೆ ರಾಷ್ಟ್ರಪ್ರಶಸ್ತಿ ಪಡೆದ ಖ್ಯಾತಿ ಮಂಸೋರೆ ಅವರದು. ಅವರ 'ಹರಿವು' ಸಿನಿಮಾ ಅಪ್ಪ–ಮಗನ ಸಂಬಂಧದ ಮೂಲಕ ಬದುಕಿನ ವಿವಿಧ ನೆಲೆಗಳನ್ನು ಶೋಧಿಸುವ ಪ್ರಯತ್ನ ನಡೆಸಿತ್ತು. ಈಗ ಮದುವೆಯ ಹರಿವಿನ ಆಯಾಮಗಳನ್ನು ಅರ್ಥ ಮಾಡಿಕೊಳ್ಳುವ ಚಿತ್ರವನ್ನು ಮಂಸೋರೆ ನಿರ್ದೇಶಿಸುತ್ತಿದ್ದಾರೆ.

ಸಿನಿಮಾದ ಶೀರ್ಷಿಕೆ 'ನಾತಿಚರಾಮಿ'. ಮದುವೆ ಸಂದರ್ಭದಲ್ಲಿ ವಧುವರರು ಪರಸ್ಪರ ನೀಡುವ ವಾಗ್ದಾನದ ಆಶಯವನ್ನು ಶೀರ್ಷಿಕೆ ಸೂಚಿಸುವಂತಿದೆ. ನಗರದ ಹೆಣ್ಣೊಬ್ಬಳು ಮದುವೆಯ ಚೌಕಟ್ಟಿನಲ್ಲಿ ಅನುಭವಿಸುವ ತವಕ ತಲ್ಲಣಗಳ ಚಿತ್ರಣ ಕಥೆಯಲ್ಲಿದೆ. ವೃತ್ತಿ ಬದುಕು ಮತ್ತು ವೈಯಕ್ತಿಕ ಬದುಕಿನ ನಡುವೆ ತೋಯ್ದಾಡುವ ಹೆಣ್ಣಿನ ಬದುಕಿನ ಕಥೆಯಿದು. ಚಿತ್ರದ ನಾಯಕಿ ಶ್ರುತಿ ಹರಿಹರನ್ ಅವರ ಮಾತಿನಲ್ಲಿ ಹೇಳುವುದಾದರೆ – 'ಇದು ವಿವಾಹ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದ ಸಿನಿಮಾ'.

ಮಂಸೋರೆ ಅವರ ಚಿತ್ರಕಥೆ ಶ್ರುತಿ ಅವರಿಗೆ ಸಿಕ್ಕಾಪಟ್ಟೆ ಇಷ್ಟವಾಗಿದೆ. ಇತ್ತೀಚಿನ ದಿನಗಳಲ್ಲಿ ಚಿತ್ರರಸಿಕರನ್ನು ಕಾಡುವ ಪಾತ್ರಗಳಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಅವರು, 'ನಾತಿಚರಾಮಿ'ಯ ಗೌರಿ ಎನ್ನುವ ಪಾತ್ರದ ಕಾಡುವಿಕೆಗೆ ಸ್ವತಃ ಒಳಗಾಗಿದ್ದಾರೆ.

'ನಾತಿಚರಾಮಿ' ಮಂಸೋರೆ ಪಾಲಿಗೆ ಒಂದು ಬಗೆಯ ಹುಡುಕಾಟದ ನಂತರ ದೊರೆತಿರುವ ಅವಕಾಶ. 'ಹರಿವು' ಚಿತ್ರಕ್ಕೆ ರಾಷ್ಟ್ರ ಹಾಗೂ ರಾಜ್ಯಪ್ರಶಸ್ತಿ ಪಡೆದರೂ ಹೊಸ ಸಿನಿಮಾ ಅವರ ಪಾಲಿಗೆ ಸಲೀಸಾಗಲಿಲ್ಲ. ಒಳ್ಳೆಯ ಸಿನಿಮಾ ಮಾಡುವುದಕ್ಕಿಂತಲೂ ನಿರ್ಮಾಪಕರನ್ನು ಹುಡುಕುವುದೇ ಹೆಚ್ಚು ಕಷ್ಟ ಎನ್ನುವ ಬಹುತೇಕ ಪ್ರತಿಭಾವಂತ ಯುವ ನಿರ್ದೇಶಕರ ಅನುಭವ ಮಂಸೋರೆ ಅವರದೂ ಆಗಿದೆ. ಈ ಹುಡುಕಾಟ–ಹೆಣಗಾಟದ ಸಂದರ್ಭದಲ್ಲೇ ಜಗನ್ಮೋಹನ ರೆಡ್ಡಿ ಹಾಗೂ ಶಿವಕುಮಾರ ರೆಡ್ಡಿ 'ನಾತಿಚರಾಮಿ' ನಿರ್ಮಾಣಕ್ಕೆ ಮುಂದಾಗಿದ್ದಾರೆ. ಬಿಂದುಮಾಲಿನಿ ಸಂಗೀತ ನಿರ್ದೇಶನ, ಗುರುಪ್ರಸಾದ್ ನರ್ನಾಡ್ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು